
SERVICE ABOVE SELF



Rotary
विश्वमित्रः
# ವಿಶ್ವಮಿತ್ರ
# VISHWAMITHRA
Weekly House Bulletin of Rotary Club Shimoga, R.I. Dist. 3182

THE MAGIC OF ROTARY 2024-25
Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278


Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –23 ದಿನಾಂಕ : 18–12–2024

## ದಿನಾಂಕ: 18.12.2024 ರ ವಾರದ ಸಭೆಯ ವರದಿ

**ದಿನಾಂಕ: 18.12.2024 ರಂದು ನಮ್ಮ ವಾರದ ಸಭೆಯಲ್ಲಿ ನಮ್ಮ ಕ್ಲಬ್‌ನ ಸದಸ್ಯರಾದ ನೇತ್ರ ತಜ್ಞರಾದ ರೊ.ಡಾ.ಪುನೀತ್ ಇಸ್ಲೂರ್‌ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ “ಕಣ್ಣಿನ ಆರೋಗ್ಯ ಮತ್ತು ರಕ್ಷಣೆ” ಬಗ್ಗೆ ಮಾತನಾಡಿದರು. ವೇದಿಕೆಯಲ್ಲಿ ಮುಖ್ಯಅತಿಥಿ ರೊ.ಡಾ.ಪುನೀತ್ ಇಸ್ಲೂರ್, ಅಧ್ಯಕ್ಷರಾದ ರೊ. ಕೆ. ಸೂರ್ಯ ನಾರಾಯಣ ಉಡುಪರವರು ಮತ್ತು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಉಪಸ್ಥಿತರಿದ್ದರು.**







ಅಂದಿನ ಸಭೆಯು ಶ್ರೀಮತಿ ಶ್ರೀದೇವಿ ಭಟ್‌ರವರಿಂದ ಸರ್ವಾರ್ಥ್ಯದಾಯಿನಿ ಗೌರಿ ನಾರಾಯಣಿ ಗುಣಾಶ್ರಯೇ ಜಗದೀಶ್ವರಿ ಎಂಬ ಭಕ್ತಿಗೀತೆಯೊಂದಿಗೆ ಪ್ರಾರ್ಥನೆ ಮಾಡಿದರು. ರೊ. ಶ್ರೀಕಾಂತ ನಾಡಿಗ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ಪ್ರಕಟಣೆ ನೀಡಿದರು. ಅಕ್ಟೋಬರ್ ತಿಂಗಳಲ್ಲಿ ಶೇ 100 ರಷ್ಟು ಹಾಜರಾತಿಯನ್ನು ದಾಖಲಿಸಿದ ಸದಸ್ಯರುಗಳಿಗೆ ವೇದಿಕೆಗೆ ರೊ.ಟಿ.ಕೆ.ಎಂ.ಭಟ್‌ರವರು ಆಹ್ವಾನಿಸಿದರು. ಅವರೆಲ್ಲರಿಗೂ ನೆನಪಿನ ಕಾಣಿಕೆ ನೀಡಲಾಯಿತು. ಪಟ್ಟಿ ಬೇರೆಡೆ ಪ್ರಕಟವಾಗಿದೆ.

2025–26 ನೇ ಸಾಲಿಗೆ ನಿಯೋಜಿತ ಅಧ್ಯಕ್ಷರಾಗಿರುವ ರೊ.ಆರ್.ಆನಂದರವರು ಮಾತನಾಡಿ, ತಮಗೆ ಮುಂದಿನ ವರ್ಷದ ಅವಧಿಗೆ ಗುರುತರವಾದ ಕ್ಲಬ್‌ನ ಅಧ್ಯಕ್ಷತೆಯ ಜವಾಬ್ದಾರಿಯನ್ನು ವಹಿಸಿರುವುದಕ್ಕೆ ವಂದನೆಗಳನ್ನು ತಿಳಿಸಿ ಜೊತೆಗೆ ಎಲ್ಲರ ಸಹಕಾರ ಕೋರಿದರು. ಅಲ್ಲದೇ ಮುಂದಿನ ವರ್ಷದ ಅವರ ಕಾರ್ಯಕಾರಿ ಮಂಡಳಿ ಮತ್ತು ನಿರ್ದೇಶಕ ಮಂಡಳಿ ತಂಡವನ್ನು ಪ್ರಕಟಿಸಿದರು. ಅವರುಗಳನ್ನು ವೇದಿಕೆಗೆ ಆಹ್ವಾನಿಸಿ ರೊ.ಪಿಡಿಜಿ. ಡಾ.ಆರ್.ಡಿ. ಪ್ರಭುರವರಿಂದ ಪುಷ್ಪ ನೀಡುವುದರ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದರು. ಅವರ ತಂಡದ ಪಟ್ಟಿಯನ್ನು ಬೇರೆಡೆ ಪ್ರಕಟಿಸಲಾಗಿದೆ. ಜೊತೆಗೆ ರೊ. ಆರ್.ಆನಂದರವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು.

ಮುಖ್ಯ ಅತಿಥಿಗಳಾದ ನೇತ್ರತಜ್ಞರಾದ ರೊ.ಡಾ.ಪುನೀತ್ ಇಸ್ಲೂರ್‌ರವರು ಕಣ್ಣಿನ ಆರೋಗ್ಯ ರಕ್ಷಣೆ ಬಗ್ಗೆ ಮಾತನಾಡಿದರು. ನಮ್ಮ ಕಣ್ಣುಗಳ ರೆಪ್ಪೆಗಳು ನಿಮಿಷವೊಂದಕ್ಕೆ 18–20 ಸಾರಿ ಬಡಿಯಬೇಕು.







ಆಗ ಕಣ್ಣುಗಳು ಸ್ವಚ್ಚಗೊಳ್ಳುತ್ತವೆ ಹಾಗೂ ತೇವಾಂಶದಿಂದ ಕೂಡಿರುತ್ತದೆ. ನಾವು ಇಂದಿನ ದಿನಮಾನದಲ್ಲಿ ಈಗಾಗಲೇ ಮೊಬೈಲ್, ಲ್ಯಾಪ್‌ಟಾಪ್, ಕಂಪ್ಯೂಟರ್‌ಗಳನ್ನು, ಟಿ.ವಿ.ಗಳನ್ನು ಹೆಚ್ಚು ಬಳಕೆ ಮಾಡುತ್ತಿದ್ದೇವೆ. ಅವುಗಳನ್ನು ಬಳಕೆ ಮಾಡುವಾಗ ನಮ್ಮ ಕಣ್ಣಿನರೆಪ್ಪೆ ಬಡಿಯುವುದು ತುಂಬಾ ಕಡಿಮೆಯಾಗುತ್ತದೆ. ಮೊಬೈಲ್ ನೋಡುವಾಗ ರೆಪ್ಪೆ ಬಡಿಯುವುದಿಲ್ಲ. ಇದರಿಂದ ಕಣ್ಣಿನಲ್ಲಿ ತೇವಾಂಶ ಕಡಿಮೆಯಾಗುತ್ತದೆ. ಸಾಫ್ಟವೇರ್ ಟೆಕ್ಕಿಗಳು ದಿನದಲ್ಲಿ ಸುಮಾರು 8 ಗಂಟೆಗಳ ಕಾಲಕಂಪೂಟರ್ ಮುಂದೆ ಕೆಲಸ ಮಾಡುತ್ತಾರೆ. ಕಂಪ್ಯೂಟರ್ ಸ್ಕ್ರೀನ್ ಮೇಲೆಯೇ ಹೆಚ್ಚು ಗಮನವಿರುವುದರಿಂದ ಪ್ರತೀ 2 ಗಂಟೆಗೊಮ್ಮೆ ಸುಮಾರು 20 ನಿಮಿಷಗಳ ಕಾಲ ಬೇರೆಡೆ ನೋಡಬೇಕು. ಇದರಿಂದ ಕಣ್ಣಿಗೆ ಆಗಿರುವ ಶ್ರಮ ಕಡಿಮೆಯಾಗುತ್ತದೆ. ಸುಮಾರು 56 ಇಂಚಿನ ಟಿ.ವಿ.ಯನ್ನು ಕನಿಷ್ಟ 5–6 ಅಡಿಗಳ ದೂರದಲ್ಲಿರಿಸಿ ನೋಡಬೇಕು. ಕಣ್ಣಿಗೆ ಶ್ರಮವಾಗದ ಹಾಗೆ ಮನೆಯ ಹಾಲ್‌ನಲ್ಲಿ ಹಾಲ್‌ಗೆ ತಕ್ಕ ಹಾಗೇ ಟಿ.ವಿ. ಸ್ಥಾಪಿಸಬೇಕು.

**2ನೇ ಪುಟಕ್ಕೆ**

## ಈ ವಾರದ ಸಭೆ

**ದಿನಾಂಕ : 25–12–2024 ಬುಧವಾರ** **ಸಂಜೆ 6:45**

### ಕೌಟುಂಬಿಕ ಸ್ನೇಹ ಮಿಲನ

### FAMILY MEET & INSTALLATION CEREMONY OF NEW ROTARACT CLUB

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ




ಟಿ.ವಿ. ಮತ್ತು ಮೊಬೈಲ್ ಸ್ಕ್ರೀನ್‌ನಿಂದ ದೂರವಿರಬೇಕು ಹಾಗೂ ಬಳಕೆ ಕಡಿಮೆ ಮಾಡಬೇಕು. ನೋಡುವ ಸಮಯವನ್ನು ಕಡಿಮೆ ಮಾಡಿ. ಮಲಗುವ ಒಂದು ಘಂಟೆಯ ಮುಂಚೆ ಮೊಬೈಲ್‌ನ್ನು ನೋಡುವುದನ್ನು ಅಂತ್ಯಗೊಳಿಸಿ. ಇವೆಲ್ಲಾ ನಮ್ಮ ದಿನ ನಿತ್ಯ ಕಣ್ಣಿನ ರಕ್ಷಣೆ ಎಂದು ವಿವರಿಸಿದರು.

ಮೆಳ್ಳಗಣ್ಣು ಇದ್ದ ಮಕ್ಕಳಿಗೆ ನೇತ್ರ ಪರೀಕ್ಷೆ ಮಾಡಿಸಿ.ಮೂಡ ನಂಬಿಕೆಯಂತೆ ಅದು ಅದೃಷ್ಟವಲ್ಲ. ಕನ್ನಡಕ ಧರಿಸುವುದರಿಂದ ಕಣ್ಣಿನ ಪವರ್ ಜಾಸ್ತಿ ಆಗುತ್ತದೆ ಎಂಬ ಕಲ್ಪನೆ ಬೇಡ. ಒಂದೊಂದು ವಯಸ್ಸಿಗೆ ಒಂದೊಂದು ತರಹದ ಬೇರೆ ಬೇರೆ ಪವರ್ ಒದಗಿ ಬರುತ್ತದೆ. ಕೆಲವರಿಗೆ ಕನ್ನಡಕ ಬೇಡವಾಗುತ್ತದೆ. ಕಣ್ಣಿನ ಪವರ್ ಕ್ಯಾರೇಟ್ ತಿನ್ನುವುದರಿಂದ ಕಡಿಮೆಯಾಗುವುದಿಲ್ಲ. ಕಣ್ಣಿನ ಪವರ್‌ಗಳನ್ನು ಬದಲಾಯಿಸಲಸಾಧ್ಯ. ಕಣ್ಣನ ಪರೀಕ್ಷೆ ಮಾಡಿಸುವುದರಿಂದ ಯಾವುದೇ ತೊಂದರೆಯಿಲ್ಲ. ಆದರೆ ಕಾಯಿಲೆ ತಡೆಗಟ್ಟಲಾಗುವುದಿಲ್ಲ. ಕಣ್ಣಲ್ಲಿ ಕಸ ಹೋದಾಗ, ಉಜ್ಜುವುದು, ತಿಕ್ಕುವುದು ಬೇಡ. ಎದೆಹಾಲು, ಕೊತ್ತಂಬರಿ ಬೀಜದ ನೀರು ಹಾಕುವುದು ಬೇಡ. ವೈದ್ಯರಿಗೆ ತೋರಿಸಿ. ಸಾದಾ ಆಂಟಿಬಯೋಟಿಕ್ ಡ್ರಾಪ್ಸ್ ಹಾಕಿರಿ. 15 ವರ್ಷದೊಳಗಿನ ಮಕ್ಕಳಿಗೆ ಸ್ಕ್ರೀನ್ ಮೊಬೈಲ್ ಕೊಡುವುದು ಬೇಡ. ನಾವುಗಳೂ ಕೂಡ ಮಕ್ಕಳ ಮುಂದೆ ಹೆಚ್ಚು ಮೊಬೈಲ್ ಉಪಯೋಗಮಾಡಬಾರದು ಎಂದರು.

ಮಧುಮೇಹ ಕಾಯಿಲೆ ಇರುವವರು ಪ್ರತೀ ವರ್ಷ ತಮ್ಮ ಕಣ್ಣಿನ ನರ ಪರೀಕ್ಷೆ ಮಾಡಿಸಿಕೊಳ್ಳುವುದು ಒಳ್ಳೆಯದು. ಕೈ ಕಾಲುಗಳನ್ನು ಪರೀಕ್ಷೆ ಮಾಡಿಸಿ ರೆಟಿನೋಪತಿ ಪರೀಕ್ಷೆ ಮಾಡಿಸಿಕೊಳ್ಳುವುದು ಒಳ್ಳೆಯದು. ಕಣ್ಣಿಗೆ ಒತ್ತಡ ಬೀಳಬಾರದು. ಆಗಾಗ ಕಣ್ಣಿನ ಗ್ಲುಕೋಮ ಪರೀಕ್ಷೆ ಮಾಡಿಸಿಕೊಳ್ಳುವುದು ಒಳಿತು. ಹೆಚ್ಚು ಬಿಸಿಲಿನಲ್ಲಿ ಇರುವವರಿಗೆ ಹೆಚ್ಚಾಗಿ ಕ್ಯಾಟರಾಕ್ಟ್ (ಕಣ್ಣಿನ ಪೊರೆ) ಬರುತ್ತದೆ. ಕಣ್ಣಿನ ಪೊರೆಯ ಕಾಯಿಲೆ ಮಲೆನಾಡು ಪ್ರದೇಶದವರಿಗಿಂತ ಬಯಲುಸೀಮೆಯಲ್ಲಿ ವಾಸಿಸುವವರಿಗೆ ಜಾಸ್ತಿ ಇರುತ್ತದೆ. ಕಣ್ಣಿನ ಪೊರೆಗೆ ಬೇರೆ ಬೇರೆ ಕಾರಣಗಳಿವೆ. ಸನ್ ಗ್ಲಾಸ್ ಹಾಕಿಕೊಳ್ಳುವುದು ಉತ್ತಮ ಎಂದರು.

**ಪ್ರಶ್ನೋತ್ತರದಲ್ಲಿ**

- ರೊ. ಎಸ್.ಜಿ. ಗೋಪಾಲ್‌ರವರು ಮಾತನಾಡಿ, ಕಾರ್ನಿಯ ಬಗ್ಗೆ ಕೇಳಿದರು. ನರದ ಸಮಸ್ಯೆ ಇರುವವರಿಗೆ ಕಾರ್ನಿಯ ಉಪಯೋಗಕ್ಕೆ ಬರುವುದಿಲ್ಲ ಎಂದರು.
- ರೊ.ಎನ್.ವಿ.ಭಟ್‌ರವರು ಕಾರ್ನಿಯದಿಂದ ಅಂಧತ್ವದ ನಿವಾರಣೆಯ ಬಗ್ಗೆ ಕೇಳಿದರು  ಶಿವಮೊಗ್ಗದಲ್ಲಿ ನೇತ್ರ ಭಂಡಾರವಿದೆ. ಅವರು ಸಂಗ್ರಹಿಸಿದ ಕಾರ್ನಿಯದಲ್ಲಿ ಎರಡು ಮೂರು ಜನರಿಗೆ ಶಸ್ತ್ರಚಿಕಿತ್ಸೆ ಮೂಲಕ ದೃಷ್ಟಿ ಕೊಡಬಹುದು ಎಂದರು.
- ರೊ. ಕಿಶೋರ್ ಶೀರನಾಳಿಯವರು ಮಾತನಾಡಿ, ಕಣ್ಣಿನ ಉರಿ ಮತ್ತು ಕಡಿತ ಉಂಟಾದಾಗ ಏನು ಮಾಡಬೇಕು. ಡ್ರಾಪ್ಸ್‌ಗಳನ್ನು ಹಾಕಬಹುದು. ಆ್ಯಂಟಿ ಬಯೋಟಿಕ್‌ಗಳು ಅವಶ್ಯಕತೆ ಇರುವುದಿಲ್ಲ ಎಂದರು.
- ರೊ.ಎನ್.ಜಿ.ಉಷಾರವರು ಮಾತನಾಡಿ ಕಣ್ಣಿನ ಒತ್ತಡದ ಬಗ್ಗೆ ಕೇಳಿದರು. ಇದು ಪೋಷಕರಿಗೆ ಇದ್ದರೆ ಬರಬಹುದು. ಮಧುಮೇಹ ಕಾಯಿಲೆ ಇದ್ದರೆ ಬರಬಹುದು. ಕಣ್ಣಿನ ಪಾರ್ಶ್ವ ಭಾಗದಲ್ಲಿ ರಕ್ತ ಕಡಿಮೆಯಾಗಬಹುದು. ಅದಕ್ಕೆ ಮುಂಚೆಯೇ ಚಿಕಿತ್ಸೆ ಪಡೆಯಬೇಕಾಗುತ್ತದೆ ಎಂದರು.
- ರೊ. ಸಿ. ವಿಜಯಕುಮಾರ್ ಮಾತನಾಡಿ, ಇದಕ್ಕೆ ವಯಸ್ಸಿನ ಮಿತಿಯಿದೆಯ ಎಂದು ಕೇಳಿದರು. ಇದಕ್ಕೆ ಸಂಶೋಧನೆ ನಡೆಯುತ್ತಿದೆ ಎಂದು ತಿಳಿಸಿದ ಮುಖ್ಯ ಅತಿಥಿಗಳು ನಮ್ಮ ಕಣ್ಣು ನಮ್ಮ ಪಕ್ಕದಲ್ಲಿ ಬರುತ್ತಿರುವ ವಸ್ತುಗಳನ್ನು ಜೀವಿಗಳನ್ನು ಗುರುತಿಸದೇ ಇರುವಾಗ ಗ್ಲುಕೋಮವಿದೆ ಎನ್ನಲಾಗುತ್ತದೆ. ಈ ಕಾಯಿಲೆ ಗೊತ್ತಾಗುವುದಿಲ್ಲ. ಆದರೆ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದರು.
- ರೊ. ಎನ್.ವಿ.ಭಟ್‌ರವರು ಮಾತನಾಡಿ, ಎಷ್ಟು ಮೌಲ್ಯದ ಕನ್ನಡಕಗಳನ್ನು ಧರಿಸಬೇಕು.  ಮೌಲ್ಯದ ಬಗ್ಗೆ ತಿಳಿಸದೇ ಅವರು ಪೋಕಲ್ ಗ್ಲಾಸ್ ಮತ್ತು ಮಲ್ಟಿ ಪೋಕಲ್ ಗ್ಲಾಸ್‌ಗಳನ್ನು ಸಂಧರ್ಭಾನುಸಾರಧರಿಸಬಹುದೆಂದು ತಿಳಿಸಿದರು.

ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ತಮ್ಮ ಮೂಕಾಭಿನಯದ ಮೂಲಕ ಕಣ್ಣಿನ ಗೀತೆಯನ್ನು ಸದಸ್ಯರುಗಳಿಗೆ ಅಭಿನಯಿಸಿ, ಪರೀಕ್ಷೆಗೆ ಒಳಪಡಿಸಿದರು. (ಅದು ಕಣ್ಣು ಎಂಬ ಪದ ಬರುವ ಗೀತೆಗಳು) ಇದನ್ನು ರೊ.ಅನುರಾಧಾ ಶೀರನಾಳಿ, ರೊ.ರಮಾಗೋಪಾಲ್ ಹಾಡಿದರು. ಹಾಡುಗಳ ವಿವರ ಇಂತಿವೆ:

- ಕಣ್ಣುಗಳು ಕಮಲಗಳು
- ನೂರು ಕಣ್ಣು ಸಾಲದು ನಾ ನಿನ್ನ ನೋಡಲು
- ಕಣ್ಣು ಕಣ್ಣು ಒಂದಾಯಿತು
- ಕಣ್ಣರೆಪ್ಪೆ ಒಂದನೊಂದು ಮರೆವುದೆ
- ಕಣ್ಣೀರಧಾರೆ ಇದೇಕೆ ಇದೇಕೆ






ನಂತರ ರೊ.ಪಿಡಿಜಿ. ಡಾ. ಆರ್.ಡಿ.ಪ್ರಭು, ರೊ. ಡಿ.ಎಸ್. ನಟರಾಜ್, ರೊ.ಎನ್.ವಿ.ಭಟ್ ರೊ. ಅನುರಾಧಾ ಶೀರನಾಳಿ, ರೊ.ರಮಾಗೋಪಾಲ್, ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸೇರಿ ಮುಖ್ಯ ಅತಿಥಿಗಳನ್ನು ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಇದೇ ಸಂದರ್ಭದಲ್ಲಿ ರೊ.ಡಿ.ಎಸ್. ನಟರಾಜ್‌ರವರು ಮಾತನಾಡಿ, ರೊ. ಪುನೀತ್ ಇಸ್ಲೂರ್‌ರವರು ಸಿಇಟಿ ರ್‍ಯಾಂಕ್ ಬಂದಾಗ ರೋಟರಿ ಕ್ಲಬ್‌ನಲ್ಲಿ ಅವರನ್ನು ಅಭಿನಂದಿಸಿದ್ದೇವೆ ಎಂದು ನೆನಪಿಸಿದರು. ರೊ.ಎನ್.ಜಿ. ಉಷಾರವರಿಂದ ವಂದನಾರ್ಪಣೆಯಾಯಿತು. ರಾಷ್ಟ್ರಗೀತೆಯೊಂದಿಗೆ ರೊ.ಕಿಶೋರ್ ಶೀರನಾಳಿಯವರಿಂದ ಭಾರತ್ ಮಾತಾಕಿಜೈ ಉದ್ಘೋಷದೊಂದಿಗೆ ಸಭೆ ಸಂಪೂರ್ಣಗೊಂಡಿತು. ❖

**Rotary Information**
**DISTRICT PROJECTS 2024-25**

1. Awareness of Arogya Swatchatha
2. Awareness of Education & Law
3. Awareness of Green & Water
4. Awareness of Rasthe Sanchara Safety

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**







ದಿನಾಂಕ: 12–12–2024, ಗುರುವಾರದಂದು ರಾಷ್ಟ್ರೀಯ ಪ್ರೌಢಶಾಲೆ ಶಿವಮೊಗ್ಗದಲ್ಲಿ ಪರಿಸರ ಸಂರಕ್ಷಣೆಯ ಘೋಷಣೆಗಳ ಬಗ್ಗೆ ಚಿತ್ರಕಲಾ ಸ್ಪರ್ಧೆ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.





ದಿನಾಂಕ: 16–12–2024 ಸೋಮವಾರದಂದು ಗುಡ್‌ಲಕ್ ಆರೈಕೆ ಕೇಂದ್ರಕ್ಕೆ ನಮ್ಮ ಕ್ಲಬ್‌ನಿಂದ ಯುಪಿಎಸ್ ಕೊಡುಗೆ ನೀಡಿದ ಸಂದರ್ಭ







ದಿನಾಂಕ: 18–12–2024, ಬುಧವಾರದಂದು ರಾಷ್ಟ್ರೀಯ ಪ್ರೌಢಶಾಲೆ ಶಿವಮೊಗ್ಗದಲ್ಲಿ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ತಯಾರಿ ಹಾಗೂ ಅಧ್ಯಯನ ತಂತ್ರಗಳ ಬಗ್ಗೆ ಜೆ.ಸಿ. ಮೋಹನ್‌ರವರಿಂದ ಟ್ರೈನಿಂಗ್ ಪ್ರೋಗ್ರಾಮ್ ಏರ್ಪಡಿಸಲಾಗಿತ್ತು.




**ಚತುರ್ವಿಧ ಪರೀಕ್ಷೆ– ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ...**

1. ಇದು **ಸತ್ಯವೇ?**
2. ಇದು ಸಂಬಂಧಪಟ್ಟ ಎಲ್ಲರಿಗೆ **ನ್ಯಾಯ ಸಮ್ಮತವೇ?**
3. ಇದು **ಸದ್ಭಾವನೆ** ಮತ್ತು **ಉತ್ತಮ ಸ್ನೇಹ ಸಂಬಂಧವನ್ನು** ಬೆಳೆಸಬಲ್ಲುದೇ ?
4. ಇದು ಸಂಬಂಧಪಟ್ಟ ಎಲ್ಲರಿಗೆ **ಪ್ರಯೋಜನಕಾರಿಯೇ?**



## ಸಂಪಾದಕೀಯ

### ಬೆನ್ನ ಹಿಂದೆ ಬಿದ್ದಿದೆ ಸ್ಪರ್ಧೆ ಎಂಬ ಹೆಬ್ಬುಲಿ !

ರಾಮು ಹಾಗೂ ಶ್ಯಾಮು ಎಂಬ ಇಬ್ಬರು ಗೆಳೆಯರು ದಟ್ಟವಾದ ಕಾಡೊಂದಕ್ಕೆ ಚಾರಣ ಹೋಗಿದ್ದರು. ಆಗ ಅವರನ್ನು ಭಾರಿ ಗಾತ್ರದ ಹುಲಿಯೊಂದು ಅಟ್ಟಿಸಿಕೊಂಡು ಬಂದಿತು. ಇಬ್ಬರೂ ತಮ್ಮ ಜೀವ ಉಳಿಸಿಕೊಳ್ಳಲು ವೇಗವಾಗಿ ಓಡಲಾರಂಭಿಸಿದರು. ಸ್ವಲ್ಪ ದೂರ ಓಡಿದ ನಂತರ, ರಾಮು ಥಟ್ಟೆಂದು ನಿಂತ ಹಾಗೂ ತನ್ನ ಬೆನ್ನಿಗೆ ಸಿಕ್ಕಿಸಿಕೊಂಡಿದ್ದ ಬ್ಯಾಗಿನಿಂದ, ವೇಗವಾಗಿ ಓಡಲು ಬಳಸುವ ಬೂಟನ್ನು ತೆಗೆದು ಅದನ್ನು ಕಟ್ಟಿಕೊಳ್ಳಲಾರಂಭಿಸಿದ. ಇದನ್ನು ಕಂಡ ಶ್ಯಾಮುನಿಗೆ ನಿಜಕ್ಕೂ ಅಚ್ಚರಿಯಾಯಿತು ಹಾಗೂ ಇವನಿಗೆಲ್ಲೋ ಖಂಡಿತಾ ತಲೆ ಕೆಟ್ಟಿರಬೇಕು ಎಂದೆನಿಸಿತು. ಆತ ರಾಮನನ್ನು 'ಅಲ್ಲಯ್ಯಾ ರಾಮು, ಈ ಬೂಟು ಹಾಕಿಕೊಂಡ ಮಾತ್ರಕ್ಕೆ ನೀನು ಹುಲಿಗಿಂತ ವೇಗವಾಗಿ ಓಡಬಲ್ಲೆಯಾ' ಎಂದು ಪ್ರಶ್ನಿಸಿದ. ಆಗ ರಾಮು ಹೇಳಿದ, 'ಇಲ್ಲ ಮಿತ್ರ, ಖಂಡಿತ ನಾನು ಹುಲಿಗಿಂತ ವೇಗವಾಗಿ ಓಡಲಾರೆ. ಆದರೆ ನಿನಗಿಂತ ಎರಡು ಹೆಜ್ಜೆ ವೇಗವಾಗಿ ಓಡಬಲ್ಲೆ. ಆಗ ಮೊದಲು ಸಿಕ್ಕುವ ನಿನ್ನನ್ನು ಹುಲಿ ಹಿಡಿದು ತಿನ್ನುತ್ತದೆ. ನಾನು ಬಚಾವಾಗುತ್ತೇನೆ.'

ಇಂದಿನ ಈ ತೀವ್ರವಾದ ಸ್ಪರ್ಧಾತ್ಮಕ ಜಗತ್ತಿನಲ್ಲಿ 'ಸ್ಪರ್ಧೆ' ಎಂಬ 'ಹುಲಿ' ಎಲ್ಲರ ಬೆನ್ನ ಹಿಂದೆ ಬಿದ್ದಿದೆ. ನಾವು ಎಷ್ಟರ ಮಟ್ಟಿಗೆ ಇನ್ನೊಬ್ಬರಿಗಿಂತ ವೇಗವಾಗಿ ಓಡಬಲ್ಲೆವು ಎಂಬುದೇ ಈ ಜಗತ್ತಿನಲ್ಲಿ ಉಳಿವಿನ ಮುಖ್ಯ ಅಗತ್ಯ. 'ಸಮರ್ಥರಿಗೆ ಮಾತ್ರ ಉಳಿವು' ಎಂಬುದು ಡಾರ್ವಿನ್‌ನ್ನ ವಿಕಾಸವಾದದ ನಿಯಮ. ಈ ಜಗತ್ತು ಸಹಾ ಅದೇ ಪ್ರಕಾರವಾಗಿ ವಿಕಾಸವಾಗುತ್ತಾ ಬಂದಿದೆ. ಹೀಗಾಗಿ ಇಂದಿನ ಈ ತೀವ್ರ ಸ್ಪರ್ಧಾತ್ಮಕ ಯುಗದಲ್ಲಿ ಬದುಕುಳಿಯಬೇಕಾದರೆ ನಮ್ಮಲ್ಲಿ ಬರಿ ವಿದ್ಯೆ. ಶಕ್ತಿಗಳಿದ್ದರೆ ಸಾಲದು, ಅವುಗಳನ್ನು ಸೂಕ್ತ ಸಮಯಕ್ಕೆ ಬಳಸುವ ಯುಕ್ತಿ ಹಾಗೂ ವಿಶೇಷ ಕೌಶಲಗಳೂ ಅತ್ಯಗತ್ಯ.

ಇಲ್ಲಿ ರಾಮು ತನ್ನ ಕಾಲಿಗೆ ಕಟ್ಟಿಕೊಂಡ, ವೇಗವಾಗಿ ಓಡಲು ಬಳಸುವ ಬೂಟು, ನಾವು ಕಲಿತ ವಿದ್ಯೆಯ ಜೊತೆಗೆ ಹೆಚ್ಚುವರಿಯಾಗಿ ಅಳವಡಿಸಿಕೊಳ್ಳಬೇಕಾದ ಕೌಶಲ್ಯವನ್ನು ಪ್ರತಿನಿಧಿಸುತ್ತದೆ. ವಿದ್ಯೆಯೊಂದಿಗೆ ಅದಕ್ಕೆ ಪೂರಕವಾದ ಕೌಶಲ್ಯವನ್ನು ರೂಢಿಸಿಕೊಂಡಾಗ ಮಾತ್ರ ನಾವು ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯಶಸ್ವಿಯಾಗಬಹುದು. ಕೌಶಲ ಎಂಬುದು ಅನುಭವ ಹಾಗೂ ಜ್ಞಾನದ ಮಿಶ್ರಣ. ಇದು ಪ್ರತಿಯೊಂದು ಕ್ಷೇತ್ರದಲ್ಲೂ ಯಶಸ್ಸಿನ ಮೂಲಭೂತ ಅಗತ್ಯ. ಇದನ್ನು ವೃದ್ಧಿಪಡಿಸಿಕೊಂಡಾಗ ಮಾತ್ರ ನಾವು ಯಾವುದೇ ಕೆಲಸವನ್ನಾಗಲಿ ಪರಿಣಾಮಕಾರಿಯಾಗಿ ಮಾಡಲು ಸಾಧ್ಯ. ಹಾಗೆಯೇ ಸಮಯಕ್ಕೆ ತಕ್ಕಂತೆ ಬದಲಾಗುವ ಮನೋಧರ್ಮದಿಂದ ನಮ್ಮನ್ನು ನಾವು ಸದಾ ಅಪ್‌ಡೇಟ್ ಮಾಡಿಕೊಳ್ಳಬೇಕು. 'ಜಗತ್ತು ಎಷ್ಟೇ ಬದಲಾಗಲಿ, ನಾನು ಮಾತ್ರ ಹೀಗೆಯೇ ಇರುತ್ತೇನೆ' ಎಂದು ಕೈಕಟ್ಟಿ ಕುಳಿತರೆ ಖಂಡಿತವಾಗಿಯೂ ಬೆನ್ನ ಹಿಂದೆ ಬಿದ್ದಿರುವ ಸ್ಪರ್ಧೆ ಎಂಬ ಹುಲಿ ನಮ್ಮನ್ನು ಇಲ್ಲವಾಗಿಸಿ ಬಿಡುತ್ತದೆ.

● ರೊ. ಎಂ. ಮಾಧವಾಚಾರ್

### ಚಿಂತನ

**ಸ್ಥಾನಮಾನ, ಅಧಿಕಾರ, ವಯಸ್ಸು, ಸೌಂದರ್ಯ ಮತ್ತು ಸಮಯ ಎಲ್ಲದಕ್ಕೂ ತನ್ನದೇ ಆದ ಇತಿಮಿತಿ ಇದೆ. ಯಾವುದೂ ಶಾಶ್ವತವಲ್ಲ. ಆದರೆ ಮಾಡಿದ ಸಹಾಯ, ಗಳಿಸಿದ ವಿಶ್ವಾಸ, ಬೆಳೆಸಿದ ಸ್ನೇಹ, ಹಂಚಿದ ಪ್ರೀತಿಯೆ ಕೊನೆಯವರೆಗೂ ಶಾಶ್ವತ**

– ರೊ. ಕೆ. ಸೂರ್ಯನಾರಾಯಣ ಉಡುಪ

**ಅಕ್ಟೋಬರ್ ತಿಂಗಳಲ್ಲಿ ಶೇ 100ರ ಹಾಜರಾತಿ ದಾಖಲಿಸಿದ ಸದಸ್ಯರುಗಳು:**

| | |
|---|---|
| ರೊ. ಟಿ.ಆರ್. ಅಶ್ವಥನಾರಾಯಣ್ | ರೊ. ವನಿತಾ ಸಂದೀಪ್ |
| ರೊ. ಎಸ್.ಜಿ. ಗೋಪಾಲ್ | ರೊ. ವೆಂಕಟರಮಣ ಹೆಗಡೆ |
| ರೊ. ಜಗದೀಶ್ ಕಾಮತ್ | ರೊ. ವೈ.ವಿ. ವೆಂಕಟರಮಣ ಜೋಯ್ಸ್ |
| ರೊ. ಕಿಶೋರ್ ಶೀರನಾಳಿ | ರೊ. ಸಿ. ವಿಜಯಕುಮಾರ್ |
| ರೊ. ಎಸ್. ಮಂಜುನಾಥ್ | ರೊ. ವಿ. ಶ್ರೀನಿವಾಸ್ |
| ರೊ. ಟಿ.ಕೆ.ಎಂ. ಭಟ್ | ರೊ. ಎನ್. ಚಂದ್ರಪ್ಪ |
| ರೊ. ರಮಾಗೋಪಾಲ್ | ರೊ. ವೀರಣ್ಣ ಎ ಹುಗ್ಗಿ |
| ರೊ. ಎನ್. ಎಸ್. ಶ್ರೀಧರ್ | ರೊ. ಎನ್.ಜಿ. ಉಷಾ |
| ರೊ. ಕೆ ಸೂರ್ಯನಾರಾಯಣ ಉಡುಪರು | |

## Interact Clubs Sponsored by our Club

1. Vasavi Public School, Shimoga
2. Sri Manjunatheshwara High School, Kumsi
3. Government Junior College, Kumsi
4. National High School, Kumsi
5. Sri Mahaveera Vidyalaya, Shimoga
6. Jnanadeepa High School, Javalli
7. Bharatiya Vidya Bhavan, Shimoga
8. National High School, Shimoga
9. Karnataka Public School, Gajnur
10. Mary Immaculate High School, Shimoga
11. Veena Sharada High School, Shimoga
12. Tunga High School, Bapuji Nagara, Shimoga
13. Tunga High School, Vidya Nagar, Shimoga
14. National High School, B.R. Project

**Rotary Club Shimoga – R.I. Dist. 3182**
**Team for the year 2025-26 – Announced by Rtn. R.Anand**

| | |
|---|---|
| Rtn. R. Anand | - President |
| Rtn. K. Sooryanarayana Udupa | - I. P. P. |
| Rtn. N. Gopinath | - President Elect |
| Rtn. Dr. Kanchan Kulkarni | - Vice President |
| Rtn. Vishwasyelburgi | - Secretary |
| Rtn. ShrikanthNadig | - Joint Secretary |
| Rtn. Laxminarayana Bhat | - Treasurer |
| Rtn. Veeranna A. Huggi | - C. L. F. (Trainer) |
| **Directors** | |
| Rtn. Suneetha Sridhar | - Club Service |
| Rtn. Senthilvelan | - Vocational Service |
| Rtn. Kishore Sheernaly | - Community Service |
| Rtn. H.S.Mohan | - International Service |
| Rtn. N.G. Usha | - Youth Service |
| Rtn. S. Manjunath | - Sargent at arms |
| **Chairman** | |
| Rtn. N.V.Bhat | - Membership |
| Rtn. S.G.Gopal | - TRF |
| Rtn. A. Manjunath | - Public Image |
| Rtn. K.C.Dasharath | - Polio Plus |
| Rtn. M.N.S. Mani | - IT & Web site |
| Rtn. M.V. Nagesh | - District Project |

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495